# ಮಹಿಳೆ ಪರಿವರ್ತನೆ ದ್ಯೋತಕ

## ಡಾ. ಮೀರಾ ಅಭಿಮತ » ಸಿಂಧಿ ಕಾಲೇಜಿನಲ್ಲಿ ರಾಷ್ಟ್ರೀಯ ಸಮ್ಮೇಳನ



ಸಮ್ಮೇಳನವನ್ನು ವಿಜ್ಞಾನಿ ಡಾ. ಬಿ.ಎಂ. ಮೀರಾ ಉದ್ಘಾಟಿಸಿದರು. ಐಸಿಎಸ್‌ಎಆರ್‌ನ ನ್ಯಾಷನಲ್ ಫೆಲೋ ಡಾ. ಕೆ. ಸುಧಾರಾವ್, ಪ್ರಾಂಶುಪಾಲ ಬಿ.ಎಸ್. ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು.

**ವಿಜಯವಾಣಿ ಸುದ್ದಿಜಾಲ** ಯಲಹಂಕ

ಅನೇಕ ಅಡೆತಡೆಗಳನ್ನು ಎದುರಿಸಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಯಾರಿಗೂ ಕಡಿಮೆ ಇಲ್ಲ ಎನ್ನುವಂಥ ಸಾಧನೆ ಮಾಡಿದ ಸಾಧಕಿಯರಿದ್ದಾರೆ ಎಂದು ವಿಜ್ಞಾನಿ ಡಾ.ಬಿ.ಎಂ. ಮೀರಾ ಅಭಿಪ್ರಾಯಪಟ್ಟಿದ್ದಾರೆ.

ಹೆಬ್ಬಾಳ ಕೆಂಪಾಪುರದ ಸಿಂಧಿ ಕಾಲೇಜ್ ಆಫ್ ಕಾಮರ್ಸ್ ಆಯೋಜಿಸಿದ್ದ ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶಗಳು, ಸವಾಲುಗಳು ಮತ್ತು ಇತಿಮಿತಿಗಳ ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದರು.

14ನೇ ಶತಮಾನದಲ್ಲಿ ಅಕ್ಕಮಹಾದೇವಿ ಆಧುನಿಕ ಯುಗದಲ್ಲಿ ಮೇಡಂ ಕ್ಯೂರಿ ಅವರಂಥ ಮಹಿಳೆಯರು ಸಾಮಾಜಿಕ ಪರಿವರ್ತನೆಯಲ್ಲಿ ತಮ್ಮದೇ ಆದ ಹೆಜ್ಜೆ ಗುರುತನ್ನು ಮೂಡಿಸಿದ್ದಾರೆ. ಅನೇಕ ಕ್ರಾಂತಿಕಾರಿ ಮಹಿಳೆಯರು ಸವಾಲುಗಳನ್ನು ಎದುರಿಸಿ ದೇಶ ಹೆಮ್ಮೆಪಡುವಂಥ ಸಾಧನೆಗಳನ್ನು ಮಾಡಿದ್ದಾರೆ ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಹೆಣ್ಣುಮಕ್ಕಳ ಬೆಳವಣಿಗೆ ಹಾಗೂ ಶಿಕ್ಷಣಕ್ಕೆ ವಿಶೇಷ ಸವಲತ್ತು ನೀಡುತ್ತಿವೆ. ಇವುಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜದಲ್ಲಿ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಬೇಕು ಎಂದು ಜಿಟಿ ಸಮೂಹ ಸಂಸ್ಥೆಗಳ ನಿರ್ದೇಶಕ ಡಾ. ಬಿ.ಜಿ ಸತ್ಯಪ್ರಸಾದ್ ಹೇಳಿದರು. ಋಗ್ವೇದದಲ್ಲಿ ಮೈತ್ರೇಯ, ಯಜ್ಞವಲ್ಕರ ಪತ್ನಿಯರು ವೇದಗಳಿಗೆ ಭಾಷ್ಯೆಗಳನ್ನು ಬರೆದು ಪುರುಷರಿಗೆ ಸಮನಾದ ಕೀರ್ತಿ ಗಳಿಸಿದ್ದರು. ಪ್ರಸ್ತುತ ನಮ್ಮ ಮುಂದಿರುವ ಸವಾಲುಗಳನ್ನು ಎದುರಿಸಿ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡುವ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಎಂದರು.

ಸವಾಲುಗಳಿಲ್ಲದೆ ಸಾಧನೆ ಸಾಧ್ಯವಿಲ್ಲ. ಸೋಲುಗಳನ್ನು ಗೆಲುವಿನ ಮೆಟ್ಟಿಲಾಗಿಸಿಕೊಂಡು ಸಾಧನೆ ಶಿಖರವೇರಬೇಕು ಎಂದು ಐಸಿಎಸ್‌ಎಆರ್‌ನ ನ್ಯಾಷನಲ್ ಫೆಲೋ ಡಾ.ಕೆ.ಸುಧಾರಾವ್ ಹೇಳಿದರು.

ಸಿಂಧಿ ಕಾಲೇಜಿನ ಪ್ರಾಂಶುಪಾಲ ಬಿ.ಎಸ್. ಶ್ರೀಕಾಂತ್, ಉಪಪ್ರಾಂಶುಪಾಲ, ಡಾ.ಎಸ್.ಅನಿಲ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.